# ಗೆಳತನವಿರಲಿ ಅನವರತ

ರಾಮ ಶಾಮ ಇಬ್ಬರು ಸೇರಿ
ಅಡವಿಯ ಕಡೆಗೆ ಓಡಿದರು
ಕವಳೆ ಹಣ್ಣನು ತಿನ್ನಲು ಬಯಸಿ
ಗುಡ್ಡವನೇರಲು ನೋಡಿದರು

ದಾರೀಲಿ ಜಿಂಕೆ ನರಿ ತೋಳಗಳು
ಜಿಗಿಯುತ ಕಾಡನು ಸೇರಿದವು
ಗಿಳಿ ಗೊರವಂಕ ನವಿಲು ಕೊಕ್ಕರೆ
ಮುಖವನು ತೋರಿಸಿ ಹಾರಿದವು

ಪಕ್ಕದ ಕೆರೆಯಲಿ ನೀರನು ಕುಡಿದು
ಇಬ್ಬರು ಹೊರಟರು ಹರುಷದಲಿ
ಕವಳೆ ಹಣ್ಣಿನ ಸ್ವಾದವ ನೆನೆದು
ಹುಡುಕುತ ನಡೆದರು ರಭಸದಲಿ

ಇವರೆಡೆ ಬರುವ ಕರಡಿಯ ಕಂಡರು
ಗಾಬರಿಗೊಂಡರು ಹೆದರುತಲಿ
ಮರವನು ಏರಿದ ಶಾಮನು ಸರಸರ
ರಾಮನು ಮಲಗಿದ ದಾರಿಯಲಿ

ಕರಡಿಯು ಬಂದಿತು ರಾಮನ ಮೂಸಿತು
ಸುಮ್ಮನೆ ಹೋಯಿತು ಕಾಡಿನಲಿ
ಕೂಡಲೆ ಶಾಮನು ಕೆಳಗೇ ಜಿಗಿದನು
ರಾಮನು ಎದ್ದನು ದುಗುಡದಲಿ

ಕರಡಿಯು ಕಿವಿಯಲಿ ಹೇಳಿತು ಏನು
ನನಗೂ ಹೇಳೆಂದನು ಶಾಮ
ಹೇಳುವೆ ಇರು ನನ್ನೆದರಿಕೆ ಹೋಗಲಿ
ಬಾಯಾರಿದೆ ಎಂದನು ರಾಮ

ಆಪತ್ಕಾಲದಿ ಆದವ ಗೆಳೆಯ
ಅರಿತು ನಡೆ ನಿಜ ಜೀವನದಿ
ಎಂದಿತು ಕರಡಿ ಹೋಯಿತು ಮರಳಿ
ನೀನೂ ಅರಿತುಕೊ ಅನುನಯದಿ

ಮಾಡಿದ ತಪ್ಪನು ಮಾಡೆನು ಗೆಳೆಯ
ಎಂದನು ಶಾಮನು ಹಲುಬುತಲಿ
ಗೆಳೆಯನ ಮಾತಿಗೆ ಕರಗಿದ ರಾಮನು
ಬಿಗಿದಪ್ಪಿದನು ಹರುಷದಲಿ

■ **ನೀ. ಶ್ರೀಶೈಲ ಹುಲ್ಲೂರು**

**ಸುಧಾ** ವಾರ ಪತ್ರಿಕೆಯ ಎಳೆಯರ ಅಂಗಳ ವಿಭಾಗಕ್ಕೆ ಕಥೆ-ಕವಿತೆ ಜೊತೆ ಮಕ್ಕಳೇ ಬರೆದ ವರ್ಣಚಿತ್ರ-ರೇಖಾಚಿತ್ರಗಳನ್ನು ಕಳುಹಿಸಬಹುದು.
**ಇ ಮೇಲ್:**
editorsu@sudha.co.in

## ಕುಂಚ ಪ್ರಪಂಚ



**ಪ್ರಣಮ್ಯ ಆರ್.**
9ನೇ ತರಗತಿ, ಸಾಂದೀಪನಿ ಆಂಗ್ಲ ಪ್ರೌಢಶಾಲೆ, ಶಿವಮೊಗ್ಗ







**ನವನೀತ್ ರಾವ್ ಕೆ.**
7ನೇ ತರಗತಿ
ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ
ಅಮ್ಟೂರು ಕೆದ್ಲ, ಬಂಟ್ವಾಳ





**ಇಂಚರ ಎಸ್.**
4ನೇ ತರಗತಿ
ಜೈನ್ ಪಬ್ಲಿಕ್ ಸ್ಕೂಲ್, ಊರುಕೆರೆ
ತುಮಕೂರು





**ಸಿಂಚನ ಪ್ರಶಾಂತ್**
7ನೇ ತರಗತಿ
ಶ್ರೀ ಕುಮಾರನ್ ಚಿಲ್ಡ್ರನ್ಸ್ ಅಕಾಡೆಮಿ, ಬೆಂಗಳೂರು